ಭಾನುವಾರದ ದಿನ ಹೋಮ, ಶಾಂತಿ ಕಾರ್ಯಕ್ರಮಗಳು ಸಂಪನ್ನವಾದವು. ಬಂದವರಿಗೆಲ್ಲ ಅವಳ ಕನಸಿನ ವೃತ್ತಾಂತವನ್ನು ಸುಶೀಲತ್ತೆ ಮರುಪ್ರಸಾರ ಮಾಡಿದರು. ಎಲ್ಲರಿಂದಲೂ ವಿಧವಿಧವಾದ ಸಲಹೆಗಳು ಕೇಳಿ ಬಂದವು. ಆಶಿಶ ಎಲ್ಲರ ಫೋಟೊ ಹಿಡಿಯುತ್ತಿದ್ದಂತೆ ನೇತ್ರಾ ಕುಂಕುಮ ಕೊಟ್ಟರೆ ಸುಜಾತ ಫಲ ತಾಂಬೂಲ ಕೊಟ್ಟಳು. "ಎಲ್ಲಾ ಭಾಳ ಛೊಲೊ ಆತು. ಇನ್ನ್ಯಾವ ಕನಸೂ ಬೀಳೂದುಲ್ಲ. ಥಣ್ಣಗಿರು" ಎಂದು ಹರಸಿ ಸುಶೀಲತ್ತೆ ಅಥಣಿಯ ದಾರಿ ಹಿಡಿದರು. ಸುಜಾತ ಕನಸಿನ ಗುಂಗನ್ನು ಕಳೆದುಕೊಳ್ಳಲು ಯತ್ನಿಸುತ್ತಾ ಅಡಿಗೆ ಮನೆಯ ನಂತರ ಟೀವಿ ಧಾರಾವಾಹಿಗಳಲ್ಲಿ ಮುಳುಗಿ ಹೋದಳು. ಆದರೂ ಅದು ಅವಳನ್ನು ಸೀರಿಯಲ್‌ನಂತೆ ಕಾಡುತ್ತಿತ್ತು.

ಇತ್ತೀಚೆಗೆ ಅವಳಿಗೆ ಒಬ್ಬಳೇ ಮನೆಯಲ್ಲಿರಲು ಭಯ. ಮುಂಬಾಗಿಲು, ಹಿತ್ತಿಲು ಬಾಗಿಲು ಹಾಕಿಕೊಂಡು ಕೋಟೆಯಲ್ಲಿ ಕುಳಿತವಳಂತೆ ಕೂರುತ್ತಿದ್ದಳು. ಯಾರಾದರೂ ಬಂದು ಬೆಲ್ ಮಾಡಿದರೆ ಎದೆ ಹೊಡೆದುಕೊಳ್ಳುತ್ತಿತ್ತು. ಅವನೇ ಬಂದಂತೆ ಭಾಸ. ಹಗಲಿನಲ್ಲೂ ಕಿಟಕಿಯಿಂದ ನೋಡಿ ಖಚಿತಪಡಿಸಿಕೊಂಡೇ ಬಾಗಿಲು ತೆರೆಯುತ್ತಿದ್ದಳು. ನೆರೆಹೊರೆಯವರಿಗೂ ಅವಳ ವರ್ತನೆ ವಿಚಿತ್ರವೆನಿಸುತ್ತಿತ್ತು. ಮುಸ್ಸಂಜೆಯಲ್ಲಿ ಯಾರಿಲ್ಲದಾಗ ಕರೆಂಟ್ ಕೈಕೊಟ್ಟುಬಿಟ್ಟರೆ ದೇವರೇ ಗತಿ. ಹೃದಯ ಬಾಯಿಗೆ ಬರುತ್ತಿತ್ತು. ಕಿಟ್ಟಿಪಾರ್ಟಿಗಳು, ಸ್ನೇಹಿತೆಯರೊಡನೆ ಹರಟೆ, ಮೂವಿಗಳು ಎಲ್ಲಾ ಕಡಿಮೆಯಾಗಿದ್ದವು. ಕೈಯಲ್ಲೊಂದು ಜಪಮಣಿ ಹಿಡಿದು ಸದಾ ರಾಮನಾಮ ಜಪ ಮಾಡುತ್ತಿದ್ದಳು. ಟೀವಿ ನೋಡುವಾಗ, ಪೇಪರ್ ಓದುವಾಗ... ಸದಾ ಕೈಯಲ್ಲಿ ಜಪಮಣಿ ಇದ್ದೇ ಇರುತ್ತಿತ್ತು. ರಾಮನಾಮ ಹೇಳುವಾಗ ಯಮದೂತರು ಹತ್ತಿರ ಬರಲ್ಲವೆಂದು ಸ್ವಾಮಿಗಳು ಹೇಳಿದ್ದನ್ನು ಅವಳು ಕೇಳಿದ್ದಳು. ದೇವರ ಕೋಣೆಯಲ್ಲಿ ಸದಾ ದೀಪ ಉರಿಯುತ್ತಿತ್ತು.

ಮುಂದೆ ಕೆಲವೇ ದಿನಗಳಲ್ಲಿ ಸುಜಾತಳ ಅತ್ತೆ, ಮಾವ ನೆಂಟರ ಮದುವೆಗೋಸ್ಕರ ಧಾರವಾಡದಿಂದ ಬಂದರು. ಅತ್ತೆ ಸುಮತಿ, ಮಾವ ಪಾಂಡುರಂಗರಾಯರು ಧಾರವಾಡದ ಮಾಳಮಡ್ಡಿಯಲ್ಲಿ ಮನೆ ಕಟ್ಟಿಸಿಕೊಂಡು ನೆಮ್ಮದಿಯಾಗಿದ್ದರು. ಸರ್ಕಾರಿ ಕೆಲಸದಲ್ಲಿದ್ದು ನಿವೃತ್ತಿ ಹೊಂದಿದವರು. ಸಂಜಯ ದೊಡ್ಡವನು. ಚಿಕ್ಕ ಮಗ ಧಾರವಾಡದಲ್ಲೇ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದ. ಅವನ ಪತ್ನಿಯೂ ಶಾಲೆಯಲ್ಲಿ ಟೀಚರ್ ಆಗಿದ್ದಳು. ಶಾಂತಿಯ ವಿಷಯ ಅತ್ತೆ, ಮಾವರಿಗೆ ಯಾರಿಂದಲೋ ತಿಳಿದಿತ್ತು. ತಮಗೆ ತಿಳಿಸದೇ... ಒಂದು ಮಾತು ಕೇಳದೇ ಮಾಡಿದ್ದು ತುಸು ಅಸಮಾಧಾನವಾಗಿತ್ತವರಿಗೆ. ಆದರೂ ತೋರಗೊಡದೇ ನೆಂಟರ ಮದುವೆಗೆ ಎಲ್ಲ ಸೇರಿ ಹೋಗಿ ಬಂದಿದ್ದಾಯಿತು. ಊಟೋಪಚಾರ, ಹರಟೆಗಳಲ್ಲಿ ಸಮಯ ಹೋಗಿದ್ದೇ ಗೊತ್ತಾಗಲಿಲ್ಲ. ರಾತ್ರಿ ಅತ್ತೆಯೊಂದಿಗೆ ಮಾತನಾಡುತ್ತ ನಿದ್ದೆ ಹೋದಾಗಲೇ ಕನಸು ಬೀಳಬೇಕೆ? ಮತ್ತದೇ ಕೆಟ್ಟ ಕನಸು. ಅದೇ ವ್ಯಕ್ತಿ. ಈ ಬಾರಿ ಅವನು ಕಾಡಿನಲ್ಲಿ ನಿಂತಿದ್ದ. "ನೀ ಏನ ಮಾಡಿದ್ರೂ ಸಾಯೋದು ತಪ್ಪಸ್ಲಿಕ್ಕಾಗೂದುಲ್ಲ. ಸುಳ್ಳ ಗುದ್ಯಾಡಬ್ಯಾಡ. ನಿನ್ನ ಪ್ರಯತ್ನಗೊಳೆಲ್ಲ ಕಾಡಿನ್ಯಾಗ ಕಳದು ಹೋಗ್ತಾವ" ಎಂದು ಎಚ್ಚರಿಸಿದ. ಬೆಚ್ಚಿ ಗಕ್ಕನೆದ್ದು ಕುಳಿತು ಅಳತೊಡಗಿದಳು. ಸುಮತಿಯೂ ಎದ್ದು ಕುಳಿತರು. ಸಂಜಯನೂ ಬಂದ. ಅವರ ಮುಂದೆ ಎಲ್ಲ ಕಥೆ ಬಿಚ್ಚಿಟ್ಟದ್ದಾಯಿತು. "ನಮಗ್ಯಾಕ ಮದ್ಲ ಹೇಳಲಿಲ್ಲ? ನಾವು ಹಿರ್‍ಯಾರು ಇದ್ದೇವಿ ಅನ್ನೋದು ಮರ್ತಬಿಟ್ಟೀರೋ ಹೆಂಗ? ಯಾರು ಏನ ಹೇಳ್ತಾರೋ ಅದನ್ನ... ಶಾಂತಿ ಗೀಂತಿ ಅಂತ ಮಾಡಕೋತ ಹೋಗೋದ?..." ಎಂದು ತಮ್ಮ ಅಸಮಾಧಾನವನ್ನು ಹೊರಹಾಕಿದರು. ಆದರೂ ಸೊಸೆಯ ಅಳುಮುಖ ನೋಡಿ ಹೆಂಗರುಳು ಮಿಡಿದಿತ್ತು. ಅವರು ಅಂತಃಕರಣ ಉಳ್ಳವರಾದರೂ ತುಸು ದರ್ಪ ಜಾಸ್ತಿ. ಅವಳನ್ನು ಸಮಾಧಾನ ಮಾಡುತ್ತ, "ಮನಿ ಕುಲದೇವ್ರಿಗೆ ಹೋಗಿಬಂದು ಎಷ್ಟ ವರ್ಷಾತು?" ಎಂದು ಕೇಳಿದರು. ಎಲ್ಲರ ತಲೆಯಲ್ಲಿ 'ಫಳಕ್' ಎಂದು ಕೋಲ್ಮಿಂಚು ಹೊಳೆದಂತೆ. "ಹೌದು, ಐದು ವರ್ಷಾತು. ಆಶಿಶನ ಮುಂಜಿವಿ ಆದ ಮ್ಯಾಲೆ ಹೋಗಿದ್ದು ಬಿಟ್ಟರ ಮುಂದ